ವಿಷಯ: ಸಿ ಮತ್ತು ಆರ್ ಪ್ರಕಾರ ಕೆ.ಎ.ಎಸ್.ರವರನ್ನು ಶಿಕ್ಷಣ ಇಲಾಖೆಗೆ ನೇಮಿಸುವುದರ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1532 (2287)

ಶ್ರೀ ಸಿ. ಎಂ. ಲಿಂಗಪ್ಪ (ರಾಮನಗರ):- ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಸಿ ಮತ್ತು ಆರ್. ಪ್ರಕಾರ ಕೆಎಎಸ್ ನವರನ್ನು ಶಿಕ್ಷಣ ಇಲಾಖೆಗೆ ನೇಮಕ ಮಾಡಲು ಅವಕಾಶವಿದೆಯೆ

ಆ ಸಿ ಮತ್ತು ಆರ್ ಪ್ರಕಾರ ನೇಮಕ ಮಾಡಲು ಅವಕಾಶವಿಲ್ಲದಿದ್ದಲ್ಲಿ ಶಿಕ್ಷಣ ಇಲಾಖೆಗೆ ಇವರನ್ನು ನೇಮಕ ಮಾಡಿದ ಉದ್ದೇಶವೇನು.

ಇ ಇವರನ್ನು ನೇಮಕ ಮಾಡಿದ ಮೇಲೆ ಕಂಡು ಬಂದಿರುವ ಸುಧಾರಣೆಗಳೇನು?

ಈ ಸುಧಾರಣೆಗಳು ಇಲ್ಲದಿದ್ದಲ್ಲಿ ಇವರನ್ನು ಮುಂದುವರೆಸುವ ಉದ್ದೇಶವೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಅ ಅವಕಾಶವಿಲ್ಲ.

ಆ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ-16(ಎ) ಪ್ರಕಾರ ಒಬ್ಬ ಅಧಿಕಾರಿಯು ಹೊಂದಿರುವ ತತ್ಸಮಾನ ಶ್ರೇಣಿಯ ಹುದ್ದೆಗೆ ರಾಜ್ಯ ಸರ್ಕಾರದ ಇತರೆ ಸೇವೆಗಳಿಗೂ ನಿಯೋಜನೆ ಅಥವಾ ವರ್ಗಾವಣೆ ಮೂಲಕ ನೇಮಕ ಮಾಡಲು (ಸರ್ಕಾರದ ಅಧಿಸೂಚನೆ ಸಂಖ್ಯೆ :ಡಿಪಿಆರ್ 57 ಎಸ್ಆರ್ಆರ್ 75, ದಿ: 25-6-77): ಅವಕಾಶವಿರುವುದರ ಪ್ರಕಾರರಿಂದ ಸದರಿ ಅಧಿಕಾರಿಯನ್ನು ನೇಮಕ ಮಾಡಲಾಗಿದೆ.

ಇ ಇವರನ್ನು ನೇಮಕ ಮಾಡಿದ ಮೇಲೆ ಆಡಳಿತ ವಿಭಾಗದಲ್ಲಿ ಹಲವು ಸುಧಾರಣೆಗಳು ಆಗಿವೆ.

ಈ ಉದ್ಭವಿಸುವುದಿಲ್ಲ.

ವಿಷಯ: ಶಿಕ್ಷಣ ಇಲಾಖೆ ಅಧಿಕಾರಿಗಳ ಅನುಪಾತದ ಬಗ್ಗೆ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1533 (2288)

ಶ್ರೀ ಸಿ. ಎಂ. ಲಿಂಗಪ್ಪ (ರಾಮನಗರ):- ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಶಿಕ್ಷಣ ಇಲಾಖೆಯಲ್ಲಿ ಎರಡನೇ ಚರ್ಚೆ (ಬಿ ವರ್ಗ) ಅಧಿಕಾರಿಗಳ ಸಂಖ್ಯೆ ಎಷ್ಟು?

ಆ 'ಬ'ವರ್ಗದ ಅಧಿಕಾರಿಗಳ ಅನುಪಾತಕ್ಕೆ 'ಎ'ವರ್ಗ ಕಿರಿಯ ಶ್ರೇಣಿಯ ಅಧಿಕಾರಿಗಳಿದ್ದಾರೆಯೇ

ಇ 'ಎ' ವರ್ಗದ ಕಿರಿಯ ಶ್ರೇಣಿ ಅಧಿಕಾರಿಗಳ ಅನುಪಾತಕ್ಕೆ ಹಿರಿಯ ಶ್ರೇಣಿಯ ಅಧಿಕಾರಿಗಳಿದ್ದಾರೆಯೇ

ಈ ಯು.ಜಿ.ಸಿ. ಪ್ರಕಾರ ಬಡ್ತಿಗೆ ಅವಕಾಶ ವಿದೆಯೇ.

ಉ ಇಲಾಖೆಯಲ್ಲಿ ಅಧಿಕಾರಿಗಳ ಅನುಪಾತ ಸರಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)-

ಅ ಸಾರ್ವಜನಿಕ ಶಿಕ್ಷಣ ಇಲಾಖೆ

ಶಿಕ್ಷಕರ ವೃಂದದ ಸಂಖ್ಯೆ	1462
ಉಪನ್ಯಾಸಕರ ಸಂಖ್ಯೆ	3383
ಪತ್ರಾಂಕಿತ ಸಹಾಯಕ ಸಂಖ್ಯೆ	44
ತಾಂತ್ರಿಕ ಶಿಕ್ಷಣ ಇಲಾಖೆ	766
ಸಾರ್ವಜನಿಕ ಗ್ರಂಥಾಲಯ ಇಲಾಖೆ	35

ಪದವಿ ಪೂರ್ವ ಶಿಕ್ಷಣ ಇಲಾಖೆ	135
ಕಾಲೇಜು ಶಿಕ್ಷಣ ಇಲಾಖೆ	
ಉಪನ್ಯಾಸಕರು	1226
ಸಹಾಯಕ ನಿರ್ದೇಶಕರು	7
ರಿಜಿಸ್ಟ್ರಾರ್	20

ಆ ಸಾರ್ವಜನಿಕ ಗ್ರಂಥಾಲಯ ಇಲಾಖೆಯನ್ನು ಹೊರತುಪಡಿಸಿ ಅನುಪಾತಕ್ಕೆ ಸರಿಯಾಗಿ 'ಎ' ಶ್ರೇಣಿಯ ಕಿರಿಯ ಅಧಿಕಾರಿಗಳು ಇದ್ದಾರೆ. ಕಾಲೇಜು ಶಿಕ್ಷಣ ಇಲಾಖೆಯ ಉಪನ್ಯಾಸಕರಿಗೆ ದಿನಾಂಕ 1-1-86ರಿಂದ ಪೂರ್ವಾನ್ವಯವಾಗಿ ಯು.ಜಿ.ಸಿ. ವೇತನ ಶ್ರೇಣಿಗಳನ್ನು ಅಳವಡಿಸಲಾಗಿದ್ದು, ಆ ಯೋಜನೆಯ ಪ್ರಕಾರ ಉಪನ್ಯಾಸಕರುಗಳಿಗೆ ಕಾಲಮಿತಿ ಬಡ್ತಿಗೆ ಅವಕಾಶವಿರುವುದರಿಂದ ಈ ಇಲಾಖೆಯಲ್ಲಿ ಯಾವುದೇ ಅನುಪಾತವನ್ನು ನಿಗಧಿಗೊಳಿಸಿರುವುದಿಲ್ಲ.

ಇ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಅನುಪಾತಕ್ಕೆ ಸರಿಯಾಗಿ ಹಿರಿಯ ಶ್ರೇಣಿಯ ಅಧಿಕಾರಿಗಳಿದ್ದಾರೆ.

ಈ ಕಾಲೇಜು ಶಿಕ್ಷಣ ಇಲಾಖೆಯ ಉಪನ್ಯಾಸಕರಿಗೆ ದಿನಾಂಕ 1-1-85ರಿಂದ ಪೂರ್ವಾನ್ವಯವಾಗಿ ಯು.ಜಿ.ಸಿ.ವೇತನ ಶ್ರೇಣಿಯನ್ನು ಅಳವಡಿಸಲಾಗಿದ್ದು ಕಾಲಮಿತಿ ಬಡ್ತಿಗೆ ಅವಕಾಶವಿದೆ.

ಉ ಹೊಸ ಶಿಕ್ಷಣ ನೀತಿ. ಕಪ್ಪುಹಲಗೆ ಯೋಜನೆ ಇತ್ಯಾದಿ ಕಾರ್ಯಕ್ರಮಗಳಿಂದ ಶಿಕ್ಷಣ ಇಲಾಖೆಯಲ್ಲಿ ಕೆಲಸ ಕಾರ್ಯಗಳ ಒತ್ತಡ ಹೆಚ್ಚಾಗಿದ್ದು, ಇಲಾಖೆಯನ್ನು ಎಲ್ಲಾ ಹಂತದಲ್ಲಿಯೇ ಪುನರ್ ರಚಿಸಲು ಕ್ರಮ ಕೈಗೊಳ್ಳುವುದರ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ: 1991ನೇ ಸಾಲಿನಲ್ಲಿದ್ದ ಅನಧಿಕೃತ ಇಂಗ್ಲೀಷ್ ಮಾಧ್ಯಮ ಶಾಲೆಗಳ ಬಗ್ಗೆ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1534 (2289)

ಶ್ರೀ ಸಿ.ಎಂ.ಲಿಂಗಪ್ಪ (ರಾಮನಗರ):- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ 1991ನೇ ಸಾಲಿನಲ್ಲಿ ಇದ್ದ ಅನಧಿಕೃತ ಇಂಗ್ಲೀಷ್ ಮಾಧ್ಯಮದ ಶಾಲೆಗಳೆಷ್ಟು?

ಆ 1992ನೇ ಸಾಲಿನಲ್ಲಿ ಈ ಶಾಲೆಗಳಿಗೆ ಅನುಮತಿ ನೀಡಲಾಗಿದೆಯೇ?

ಇ ಅನುಮತಿ ನೀಡದಿದ್ದರೆ ಅಂತಹ ಶಾಲೆಗಳನ್ನು ಮುಚ್ಚಲಾಗಿದೆಯೇ?

ಶ್ರೀ ಎಂ.ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)-

ಅ ರಾಜ್ಯದಲ್ಲಿ ಅನಧಿಕೃತವೆಂದು ಘೋಷಿಸಿರುವ ಶಾಲೆಗಳ ಸಂಖ್ಯೆ 493

ಆ ಇಲ್ಲಾ.

ಇ ಇಲ್ಲಾ.

ವಿಷಯ: ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಾಸವಾಗಿರುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1536 (2179)

ಶ್ರೀ ಅಜಯ್‌ಕುಮಾರ್ ಸರ ನಾಯಕ್ (ಬಾಗಲಕೋಟೆ):- ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಆಗಾಗ್ಗೆ ವಿದ್ಯುತ್ ನಿಲುಗಡೆ ಹಾಗೂ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಾಸವಾಗಲು ಕಾರಣರ್ಯಾರು?

ಶ್ರೀ ಎಂ.ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು)-

ಅ ವ್ಯವಸ್ಥೆಯಲ್ಲಿನ ತೊಂದರೆಯಿಂದಾಗಿ ವಿದ್ಯುತ್ ಸರಬರಾಜಿನಲ್ಲಿ ಅಡಚಣೆ ಉಂಟಾಗುತ್ತಿದೆ. ಇದಕ್ಕೆ ಯಾರೂ ಕಾರಣರಲ್ಲ. ಅನಿರೀಕ್ಷಿತ ಕಾರಣಗಳಿಗಾಗಿ ಮತ್ತು ಅನಿವಾರ್ಯ ಪರಿಸ್ಥಿತಿಗಳಲ್ಲಿ